ಕಾಣುವುದಿಲ್ಲ. ಅದರಲ್ಲೂ ಕರಿಹೆಂಚಿನ, ಮಣ್ಣಿನ ಮನೆಗಳು. ಎರಡನೆಯವಳು ಒಂದಿಷ್ಟು ಹೊಂದಿಕೊಂಡಿದ್ದರೆ ಮದುವೆಯನ್ನು ಅಣ್ಣನ ಮನೆಯಲ್ಲಿ, ಅದೂ ಇಂಥ ಗತಿಗೆಟ್ಟಹಳ್ಳಿಯಲ್ಲಿ ಮಾಡುವ ಪ್ರಮೇಯವಿರಲಿಲ್ಲ. ವಾಸವಿಮಹಲ್‌ನಂಥ ಭರ್ಜರಿ ಕಲ್ಯಾಣಮಂಟಪದಲ್ಲಿ ಪಟ್ಟಣದಲ್ಲೇ ಮಾಡಬಹುದಿತ್ತು. ನನ್ನ ಕರೆಗೆ ಡಿ.ಸಿ.ಯವರೇನು ಮಂತ್ರಿಗಳೂ ಬರುವವರಿದ್ದರು. ಅಳಿಯಂದಿರೆದುರಿಗೆ ಘನತೆ, ಗೌರವಗಳನ್ನು ಹಿಗ್ಗಿಸುವ ಅವಕಾಶವನ್ನೇ ಹಾಳು ಮಾಡಿದಳು ಇವಳು.

ಜಿಟಿ ಜಿಟಿ ಮಳೆಯಲ್ಲಿ ಮಂದ ಬೆಳಕಿನಲ್ಲಿ ಮಸುಕಾಗಿ ಈಕೆ ಕೈಬೀಸಿ ಕರೆಯುವುದು ಕಾಣುತ್ತದೆ. ಚಂಗನೆ ನೆಗೆದು ಓಡುತ್ತೇನೆ.

'ಎಂಥ ಕೊರೆಯೋ ಚಳಿ ಇದೆ... ಶಾಲು ತಗೊಳ್ರೀ' ಎಂದು ಮೈ ತುಂಬಾ ಶಾಲು ಹೊದಿಸುತ್ತಾಳೆ.

'ಮೊದಲೆ ತಲೇಲಿ ಕೂದಲಿಲ್ಲ. ಈ ಟೋಪಿನಾದ್ರೂ ಹಾಕ್ಕಳ್ರಿ. ಎಲ್ಲಾ ನಮ್ಮ ಪ್ರಾರಬ್ಧ' ಅನ್ನುವಾಗ ಅವಳ ಕಂಠ ಗದ್ಗದವಾಗುತ್ತದೆ. ಉಲ್ಲನ್ ಟೋಪಿ ಧರಿಸಿ, ಶಾಲಿನೊಳಗೆ ಹುದುಗಿದಾಗ ಹಾಯೆನಿಸುತ್ತದೆ.

'ಹೇಗೆ?' ಎಂದು ಅವಳ ಮೋರೆ ನೋಡುತ್ತೇನೆ. ನಾನು ಕೇಳಿದ್ದು ಒಂದು ಪದವಾದರೂ ನನ್ನ ಮನಸ್ಸಿನ ಉದ್ವೇಗ, ಆಂದೋಲನ, ಅಸಹಾಯಕತೆ, ವ್ಯಥೆ ಎಲ್ಲವನ್ನೂ ತೆರೆದಿಟ್ಟಿರಬೇಕು.

'ಹೇಗೂ ಇಲ್ಲ. ಈಗ ತಾನೆ ಒಂದೆರಡು ಮಾತು ಆತನ ಜೊತೆ ಮಾತಾಡಿದ್ದಾಗಿತ್ತು. ಇಬ್ಬರೂ ನಗ್ತಾ ಇದ್ರು. ಇದೇ ಸಮಯ ನೋಡಿ ನಾನೂ ಹತ್ತಿರ ಹೋದೇರಿ. ಸೆರಗು ಸರಿಯಾಗಿ ಹೊದ್ಕೋಳೇ ಅಂತ ಮೆದುವಾಗಿ ಮೈಮೇಲೆ ಕೈಯಿಟ್ಟೆ. ಶತ್ರುವನ್ನ ನೋಡಿದ ಹಂಗೆ ನೋಡಿ, ಕೈಕಿತ್ತು ಎಸೆದುಬಿಟ್ಟಳು ಕಣ್ರಿ' ಭಾಗ್ಯ ಬಿಕ್ಕುತ್ತಾಳೆ.

'ಹುಶ್, ಸುಮ್ನಿರು ಮಹರಾಯಳೆ. ನಿನಗಂತೂ ಗುಟ್ಟು ಅನ್ನೋದೇ ಇಲ್ಲ' ಮೆಲ್ಲಗೆ ಗದರುತ್ತೇನೆ.

'ತಾಯಿಯಾದವಳು ಬುದ್ಧಿಮಾತಿಗೆ ಒಂದೇಟು ಹಾಕಿದ್ದಕ್ಕೆ ಇಷ್ಟು ದ್ವೇಷವಾ?' ಮುಗ್ಧಳಾಗಿ ಕೇಳುತ್ತಾಳೆ.

'ಹುಚ್ಚಿ, ಹರಯಕ್ಕೆ ಬಂದ ಮಕ್ಕಳಿಗೆ ತಾಯಿತಂದೆ ಮಾತ್ರ ಯಾವ ಲೆಕ್ಕವೆ? ಅದರಲ್ಲೂ ಪ್ರೇಮದ ಗುಂಗಿನಲ್ಲಿ ಸಿಕ್ಕವರಿಗೆ ತಂದೆತಾಯಿಗಳೇ ಮೊದಲ ಶತ್ರುಗಳು. ಹೋಗ್ಲೋಗು, ಅವಳ ಹತ್ತಿರವೇ ಇರು...' ಸಾಂತ್ವನ ಹೇಳುತ್ತೇನೆ. ಅವಳಿಗೆ ಕಾಣದಂತೆ ಕಣ್ಣೊರೆಸಿಕೊಳ್ಳುತ್ತೇನೆ.

'ಹೊರಗಡೆ ವಿಪರೀತ ಚಳಿ. ಮಳೆಬೇರೆ. ಒಂದು ವಾರದಿಂದ ನಿಮಗೆ ನಿದ್ದೆಯಿಲ್ಲ. ಹೀಗಾದ್ರೆ ಆರೋಗ್ಯದ ಗತಿ ಹೆಂಗ್ರಿ?' ಭಾಗ್ಯ ಕೇಳುತ್ತಾಳೆ. ಪೆದ್ದು ಹೆಂಗಸು ಅಂದುಕೊಂಡ ಬಗ್ಗೆ ಕನಿಕರ ಉಂಟಾಗುತ್ತದೆ.

'ನಿನ್ಗೂ ವಾರದಿಂದ ನಿದ್ದೆಯಿಲ್ಲವಲ್ಲೆ. ಇಂಥ ಮಕ್ಕಳನ್ನ ಪಡೆದ ಭಾಗ್ಯಕ್ಕೆ ಇಷ್ಟಾದ್ರೂ ಅನುಭವಿಸಬ್ಯಾಡ್ವಾ... ನನ್ನ ಬಗ್ಗೆ ಚಿಂತೆ ಹಚ್ಕೋಬೇಡ. ನಾಳೆ ಮುಹೂರ್ತ ಒಂದು ಮುಗಿದುಬಿಡ್ಲಿ. ಆಮೇಲೆ ಜೊತೆಯಾಗೇ ಮಲಗಿ ನಿದ್ದೆ ಮಾಡೋಣ... ಏನು?'– ಅವಳ ಭುಜವನ್ನು ನನ್ನ ಭುಜದಿಂದ ತಿವಿದು ಕೀಟಲೆಯ ನಟನೆ ಮಾಡುತ್ತೇನೆ. ಇಂಥ ಆಪತ್ತಿನಲ್ಲೂ ನಾನು ಸಹನೆಯಿಂದಿರುವುದನ್ನು ಕಂಡ ಅವಳಲ್ಲೂ ಒಂದಿಷ್ಟು ಧೈರ್ಯ ಸಂಚಾರವಾಗುತ್ತದೆ. ಅವಳು ನಗದಿದ್ದರೂ ಕಣ್ಣುಗಳಲ್ಲಿನ ಭೀತಿ ಕೊಂಚ ಕಡಿಮೆ ಆಗಿ ಅರಳಿಕೊಳ್ಳುತ್ತವೆ.